# ಸಾಹಿತ್ಯದಲ್ಲಿ ರುಚಿ ಹೇಗೋ ಹಾಗೆ ಶುಚಿಯೂ ಬೇಕು



**ಶಿವರಾಮ ಕಾರಂತ**

ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಬಂದಿರುವುದೇನೋ ನಿಜ. ಅದು ಬರುವ ಮುಂಚೆಯೂ ನಾವು ಬರೆಯುತ್ತಿದ್ದೆವು; ಇಂದೂ ಬರೆಯುತ್ತಿದ್ದೇವೆ; ನಾಳೆಯೂ ಬರೆಯುವವರೇ, ಯಾರಿಗೆ ಯಾರೂ 'ಬರೆಯಬೇಡಿ' ಎನ್ನುವ ಅಧಿಕಾರವೂ ಇಲ್ಲ. ಬರೆಯುವುದು ನಮ್ಮ ಸ್ವಾತಂತ್ರ್ಯ; ಜನ್ಮಸಿದ್ಧ ಹಕ್ಕು. ನಿಜ ನಾವು ನಿರಂಕುಶರು; ನಿರಂಕುಶಮತಿಗಳು; ನಿರಂಕುಶವಾಣಿಗಳು. ಆದರೆ ನಾವು ಬರೆದುದೆಲ್ಲ ಸಾಹಿತ್ಯವಾಗುತ್ತದೆ, ಆಗಬೇಕು. ಅದನ್ನು ಜನ ಓದಬೇಕು, ಓದಿ ಮೆಚ್ಚಲೇಬೇಕು ಎಂಬ ಚಪಲ ಮಾತ್ರ ಬೇಡ. ಆ ಬಯಕೆ ನಮ್ಮಲ್ಲಿದ್ದರೆ, ಆಗ ನಾವು ಓದುಗರನ್ನು ಆಶ್ರಯಿಸಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸ್ವಾತಂತ್ರ್ಯಕ್ಕೊಂದು ಮಿತಿ ಬಂತೇ ಬಂತು. ಆ ಜನರಿಗೆ ಓದದಿರುವ ಸ್ವಾತಂತ್ರ್ಯವಿದೆ! ಓದಿ ರೇಗುವ ಸ್ವಾತಂತ್ರ್ಯವಿದೆ! ಓದಿ, ರೇಗಿ ಉಗುಳುವ ಸ್ವಾತಂತ್ರ್ಯವೂ ಇದೆ. ಓದಿ, ಓದಿದುದು ತಿಳಿಯದೆ ತೆಪ್ಪಗಿರುವ ಸ್ವಾತಂತ್ರ್ಯವೂ ಅವರಿಗಿದೆ. ಓದುಗ ಓದಲೇಬೇಕೆಂಬ ಕಡ್ಡಾಯವಿಲ್ಲ. ಅದು ಹೇಗೆ ಬರಬೇಕು? ನಮ್ಮ ಹಿಂದಿನ ಹಲವು ಬದಲಾವಣೆಗಳೂ ಈ ತತ್ವವನ್ನು ಸಿದ್ಧ ಮಾಡಿ ತೋರಿಸುತ್ತವೆ. ಹೊರಗಿನ ಅಂಕುಶ ನಮಗಿಲ್ಲದೆ ಹೋದರೂ, ಸದಸದ್ವಿವೇಕ ದೃಷ್ಟಿಯನ್ನು ನಾವಾಗಿ ಬೆಳಸಿಕೊಳ್ಳದೆ, ಅದರ ಅಂಕುಶಕ್ಕೆ ಒಳಗಾಗಿ ಸಾಹಿತ್ಯ ನಿರ್ಮಾಣ ಮಾಡದೆ ಹೋದಲ್ಲಿ, ಅದರಿಂದ ಕಸದ ಬುಟ್ಟಿಗಳು ತುಂಬಬಹುದೇ ಹೊರತು ಸಾಹಿತ್ಯವೂ ತುಂಬುವುದಿಲ್ಲ, ಬದುಕೂ ತುಂಬುವುದಿಲ್ಲ. ಅಂತಹ ಬರವಣಿಗೆಗಳಿಂದ ಬಚ್ಚಲು ಬೆಳಗಬಹುದೇ ಹೊರತು, ಬದುಕು ಬೆಳಗಲಾರದು.

ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ: ಅವು ಅವಳಿ ಜವಳಿ; ಒಂದರ ಉಸಿರು ಇನ್ನೊಂದರ ಉಸಿರು; ಒಂದರ ಜೀವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ, ಸೊಗಸು, ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ, ಜನತೆಯ ಕಿವಿ ಕಣ್ಣುಗಳಿಗೆ ಕೊಡುವ ಕರಕರೆ. ಸಾಹಿತ್ಯ ಸೃಷ್ಟಿಯೆಂಬುದು ಕಾರ್ಖಾನೆಗಳಲ್ಲಿ ಉತ್ಪನ್ನ